**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 12.11.2025**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3 ಪರ ಶ್ರೀ ಪಿ ಯು ಪಿ ವಕೀಲರಿಂದ**

ನಾನು ಸದರಿ ದಾವೆಯನ್ನು ಸುಮಂಗಲ, ಸುರೇಶ ಮತ್ತು ಇತರರು ತೊಂದರೆ ಕೊಡುತ್ತಿದ್ದ ಕಾರಣ ನಾನು ದಾವೆಯನ್ನು ದಾಖಲಿಸಿರುತ್ತೇನೆ. ಇತರರ ಹೆಸರಗಳು ಈಗ ನೆನಪಿಲ್ಲ. ನಾನು ನನ್ನ ದಾವಾ ಸ್ವತ್ತಿನ ವಿವರದಲ್ಲಿ ಚೆಕ್ಕುಬಂದಿಯನ್ನು ತಿಳಿಸಿರುವುದಿಲ್ಲ ಎಂದರೆ ಸರಿ . ದಾವಾ ಆಸ್ತಿಯ ಐ ಟಂ ನಂ 1 ಮತ್ತು 2 ಕ್ಕೆ ಒಂದೇ ಚಕ್ಕುಬಂದಿ ಇರುತ್ತದೆ. ನಾನು ನನ್ನ ದಾವಾಸ್ವತಿನ ವಿವರದಲ್ಲಿ ಮಣ್ಣಿನ ಹಂಚಿನ ಮನೆ ಎಂದು ತಿಳಿಸಿದ್ದು ಅದು ಎಷ್ಟು ಅಗಲ ಉದ್ದ ಇದೆ ಎಂದು ತಿಳಿಸಿರುವುದಿಲ್ಲ ಎಂದರೆ ಸರಿ . ಕುಶಾಲನಗರದ 4 ನೇ ಬ್ಲಾಕ್ ಸರ್ವೇ ನಂ 53/1, 53/2 , 53/3 ರ ಈ ಸರ್ವೆ ನಂಬರಗಳು ಮುಳ್ಳುಸೋಗೆ ಗ್ರಾಮದ ರೆವಿನ್ಯೂ ಸರ್ವೆ ನಂ 96 ಕ್ಕೆ ಸಂಬಂದಿಸಿದ್ದು ಎಂದರೆ ಸರಿ . ಒ ಎಸ್ ನಂ 48/2004 ಹಿರಿಯ ಸಿವಿಲ್ ನ್ಯಾಯಾಲಯ, ಮಡಿಕೇರಿ ಯಲ್ಲಿ ಇರುವ ಒಂದು ದಾವೆಯಲ್ಲಿ ನಾನು ನಾನು 4 ನೇ ಪ್ರತಿವಾದಿ ಎಂದರೆ ಸರಿ . ಸದರಿ ದಾವೆಯಲ್ಲಿ ಹರೀಶ್ ರವರು 3 ನೇ ಪ್ರತಿವಾದಿಯಾಗಿದ್ದರು ಎಂದರೆ ಸರಿ . ಮುಳ್ಳುಸೋಗೆ ಗ್ರಾಮದ ಸರ್ವೆ ನಂ 96, 34 ವಿಸಿರ್ಣ ಆಸ್ತಿಯನ್ನು ನಾನು ನನ್ನ ಹೆಂಡತಿ ಮತ್ತು ಮಕ್ಕಳು ಸೇರಿ ಹರೀಶ ರವರಿಗೆ ನೊಂದಣಿ ಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಒ ಎಸ್ ನಂ 48/2004 ರಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರಂಲ್ಲಿ ಮಾರಾಟ ಮಾಡಿರುವ ವಿಚಾರವನ್ನು ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು

ಹರೀಶ ರವರು ನಾನು ಖರೀದಿ ಮಾಡಿಲ್ಲ ಎಂದು ಅವರೇ ಬರೆದುಕೊಟ್ಟಿದ್ದಾರೆ ಎಂದು ನುಡಿದರು.

ಸರ್ವೆ ನಂ 96 ರಲ್ಲಿ ಒಟ್ಟು 34 ಸೆಂಟ್ಸ ಮಾರಾಟ ಮಾಡಿದ್ದರಿಂದ ನಾವು ದಾವೆಯಲ್ಲಿ ತೋರಿಸುವಂತಹ 5 ಸೆಂಟ್ಸ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ಒ ಎಸ್ ನಂ 48/2004 ರಲ್ಲಿ ನನ್ನ ವಿರುದ್ದ ಶಾಶ್ವತ ಪ್ರತಿಬಂದಕಾಜ್ಞೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಕೇಸಿನಲ್ಲಿ ಸೋತಿರುವ ವಿಚಾರ ನನಗೆ ತಿಳಿದಿದೆ ಎಂದು ನುಡಿದರು. ಆರ್ ಎ 18/13 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದು ಅದು ವಜಾ ಆಗಿರುತ್ತದೆ ಎಂದರೆ ಸರಿ . ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ ಎ ಸಿ 967/2015 ರಂತೆ 2 ನೇ ಅಪೀಲನ್ನು ಸಲ್ಲಿರಸಿರುತ್ತೇನೆ ಎಂದರೆ ಸರಿ . ಸದರಿ ಆರ್ ಎ ಸಿ ಪ್ರಕರಣದಲ್ಲಿ ನಾನು ಮೆಮೊ ಸಲ್ಲಿಸಿ ಸದರಿ ಅಪೀಲನ್ನು ಹಿಂಪಡೆದುಕೊಂಡಿರುತ್ತೇನೆ ಎಂದರೆ ಸರಿ .

ಪ್ರತಿವಾದಿ ನಂ 1 ರಿಂದ 3 ರವರ ವಕೀಲರು ಮುಂದುವರಿದ ಪಾಟಿ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ